1 ಚಿನ್ಹೆ (220)
4/4
06/01/24

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್. ರವರ ನಿಯಮ 72ರ ಪ್ರಶ್ನೆಗೆ ಉತ್ತರ.

**ಪ್ರಶ್ನೆ:**

ರಾಜ್ಯದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿನದಲ್ಲಿ ಬರುವ ಒಟ್ಟು ವಸತಿ ಶಾಲೆ ಮತ್ತು ಕಾಲೇಜುಗಳ ಸಂಖ್ಯೆ: 849 ಮತ್ತು ಇದರಲ್ಲಿ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಶಿಕ್ಷಕರ ಸಂಖ್ಯೆ: 561 ಇದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ಸಾರ್ವಜನಿಕರಿಂದ ದೂರುಗಳು ಬಂದರು ಸಹಾ ಅವಶ್ಯಕತೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಂಪ್ಯೂಟರ್ ಶಿಕ್ಷಕರು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಇದರಿಂದ ಕಂಪ್ಯೂಟರ್ ಶಿಕ್ಷಕರ ಅವಶ್ಯಕತೆ ಇರುವ ವಸತಿ ಶಾಲೆಗಳಗೆ ತೊಂದರೆಯಾಗುತ್ತಿದ್ದು, ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ತುಂಬಾ ಮುಖ್ಯವಾಗಿದ್ದು, ಬೋಧಿಸಲು ಕಂಪ್ಯೂಟರ್ ಶಿಕ್ಷಕರು ಇಲ್ಲದೆ ಇರುವುದು ತುಂಭಾ ವಿಷಾಧನಿಯವಾಗಿದೆ. ಎಸ್.ಸಿ/ಎಸ್.ಟಿ ಮಕ್ಕಳು ಕಂಪ್ಯೂಟರ್ ಶಿಕ್ಷಣದಿಂದ ವಂಚಿತರಾಗಿ ತೊಂದರೆ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಎಸ್.ಸಿ/ಎಸ್.ಟಿ ಮಕ್ಕಳ ಕಂಪ್ಯೂಟರ್ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡುವ ಸಲುವಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಕೇಂದ್ರ ಕಚೇರಿ ಬೆಂಗಳೂರು. ಇಲ್ಲಿ ನಿಯೋಜನೆಯ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಕಂಪ್ಯೂಟರ್ ಶಿಕ್ಷಕರನ್ನು ನಿಯೋಜನೆಯಿಂದ ಬಿಡುಗಡೆ ಮಾಡುವಂತೆ ಸರ್ಕಾರದ ಗಮನ ಸೆಳೆಯಲು ಅನುಮತಿಸುವಂತೆ ವಿನಂತಿಸುತ್ತೇನೆ.

**ಉತ್ತರ:**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ದಿನಾಂಕ:02.02.2000 ರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ 84 ವಸತಿ ಶಾಲೆಗಳೊಂದಿಗೆ ಕಾರ್ಯಾರಂಭ ಮಾಡಿ, ಹಂತ ಹಂತವಾಗಿ ವಸತಿ ಶಾಲೆಗಳು ಮಂಜೂರಾಗಿ ಪ್ರಸ್ತುತ 874 (ಪರಿಶಿಷ್ಟ ಜಾತಿ -539, ಪರಿಶಿಷ್ಟ ವರ್ಗ-156 ಹಾಗೂ ಹಿಂದುಳಿದ ವರ್ಗ-179) ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.

ಸಂಘದ ಕೇಂದ್ರ ಕಛೇರಿಗೆ ಆರ್ಥಿಕ ಇಲಾಖೆಯಿಂದ 84 ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಮಂಜೂರಾಗಿರುವ 84 ಹುದ್ದೆಗಳ ಪೈಕಿ 32 ಅಧಿಕಾರಿಗಳು ಬೇರೆ ಬೇರೆ ಇಲಾಖೆಗಳಿಂದ ನಿಯೋಜನೆ ಮೇರೆಗೆ, ಸಂಘದ 07 ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ 45 ಸಿ ಮತ್ತು ಡಿ ವೃಂದದ ಹುದ್ದೆಗಳಲ್ಲಿ ಹೊರಸಂಪನ್ಮೂಲ ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ತೆಗಳ ಸಂಘದ ಕೇಂದ್ರ ಕಛೇರಿಯಲ್ಲಿ ಆಡಳಿತ ಶಾಖೆ, ಲೆಕ್ಕಶಾಖೆ, ಶಿಕ್ಷಣ ಶಾಖೆ ಹಾಗೂ ತಾಂತ್ರಿಕ ಶಾಖೆಗಳು ಕಾರ್ಯನಿರ್ವಹಿಸುತ್ತಿವೆ.

ಆಡಳಿತ ಶಾಖೆಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ತೆಗಳ ಸಂಘದ ಕೇಂದ್ರ ಕಛೇರಿಯಿಂದ 874 ವಸತಿ ಶಾಲೆ/ಕಾಲೇಜುಗಳ 2,17,970 ವಿದ್ಯಾರ್ಥಿಗಳಿಗೆ ಅವಶ್ಯವಿರುವ ಆಹಾರ, ಸಮವಸ್ತ್ರ, ಪಠ್ಯಪುಸ್ತಕ, ನೋಟ್ ಪುಸ್ತಕ, ಲೇಖನ ಸಾಮಗ್ರಿಗಳು, HRMS, ತಂತ್ರಾಂಶ ಮೂಲಕ ಖಾಯಂ ಬೋಧಕ/ ಬೋಧಕೇತರ ಸಿಬ್ಬಂದಿಗಳ ವೇತನ ಹಾಗೂ SMS ತಂತ್ರಾಂಶದ ಮೂಲಕ ಗ್ರೂಪ್-ಡಿ ವೃಂದದ ಸಿಬ್ಬಂದಿಗಳ ವೇತನ ಹಾಗೂ ವಸತಿ ಶಾಲೆ/ಕಾಲೇಜುಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

ಮುಂದುವರೆದು, ವಸತಿ ಶಾಲೆ/ಕಾಲೇಜುಗಳ ಸಿಬ್ಬಂದಿಗಳ ಸೇವಾ ಸೌಲಭ್ಯಗಳನ್ನು ಹಾಗೂ ಮಾನ್ಯ ನ್ಯಾಯಾಲಯಗಳಲ್ಲಿ ಸಂಘದ ಪರವಾಗಿ ಹಾಗೂ ವಿರುದ್ಧ ದಾಖಲಾಗುವ ಪ್ರಕರಣಗಳ ಮೇಲ್ವಿಚಾರಣೆ ಮತ್ತು ಸೂಕ್ತ ಕ್ರಮ, ವಸತಿ ಶಾಲೆ/ಕಾಲೇಜುಗಳ ಸಿಬ್ಬಂದಿಗಳ ವಿರುದ್ಧ ದಾಖಲಾಗುವ ದೂರುಗಳ ಮೇಲೆ ಶಿಸ್ತು ಕ್ರಮಕೈಗೊಳ್ಳಲು ಹಾಗೂ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಸರ್ಕಾರದ ಅನುಮೋದನೆಯೊಂದಿಗೆ ತಂತ್ರಾಂಶಗಳಲ್ಲಿ ಟೆಂಡರ್ ಆಹ್ವಾನಿಸಿ, ಪೂರೈಕೆ ಮಾಡುವ ಕಡತಗಳ ನಿರ್ವಹಣೆಗಾಗಿ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

ಶಿಕ್ಷಣ ಶಾಖೆಯಲ್ಲಿ ವಸತಿ ಶಾಲೆ/ಕಾಲೇಜುಗಳ 2,17,970 ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಶೈಕ್ಷಣಿಕ ಚಟುವಟಿಕೆಗಳು, ಕಾರ್ಯಗಾರಗಳು, ಆನ್‌ಲೈನ್ ತರಗತಿಗಳು, ತಜ್ಞರಿಂದ ಮಾರ್ಗದರ್ಶನ, ಪ್ರತಿ ವರ್ಷ ಪ್ರವೇಶ ಪ್ರಕ್ರಿಯೆ ಹಾಗೂ ಶಾಲೆ/ಕಾಲೇಜುಗಳ ಸಿಬ್ಬಂದಿಗಳಿಗೆ ತರಬೇತಿ/ಕಾರ್ಯಗಾರ ಹಾಗೂ ಇತರೆ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಹಾಗೂ ಪಿ.ಯು.ಸಿ. ವಿದ್ಯಾರ್ಥಿಗಳಿಗೆ JEE/NEET/CET ತರಬೇತಿ ಕಡತಗಳ ನಿರ್ವಹಣೆಗಾಗಿ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

ತಾಂತ್ರಿಕ ಶಾಖೆಯಿಂದ 874 ವಸತಿ ಶಾಲೆ/ಕಾಲೇಜುಗಳ ಪೈಕಿ 670 ವಸತಿ ಶಾಲೆ/ಕಾಲೇಜುಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉಳಿದ 204 ವಸತಿ ಶಾಲೆ/ಕಾಲೇಜುಗಳ ಪೈಕಿ 137 ವಸತಿ ಶಾಲೆ/ಕಾಲೇಜುಗಳ ಸ್ವಂತ ಕಟ್ಟಡ ಕಾಮಗಾರಿ ವಿವಿಧ ಹಂತದಲ್ಲಿ ಪ್ರಕ್ರಿಯೆಯಲ್ಲಿರುತ್ತವೆ. 69 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗಿರುತ್ತದೆ.

ಸ್ವಂತ ಕಟ್ಟಡ ನಿರ್ಮಾಣ ಮಾಡಲು ಅಂದಾಜು ಪಟ್ಟಿ, ಸರ್ಕಾರದ ಅನುಮೋದನೆಯೊಂದಿಗೆ ಟೆಂಡರ್ ಪ್ರಕ್ರಿಯೆ, ಹೊಸದಾಗಿ ನಿರ್ಮಾಣವಾಗುತ್ತಿರುವ ಸ್ವಂತ ಕಟ್ಟಡದ ನಿವೇಶನಗಳ ಪರಿಶೀಲನೆ, ಮೇಲ್ವಿಚಾರಣೆ, ಈಗಾಗಲೇ ಸ್ವಂತ ಕಟ್ಟಡದ ನಿರ್ಮಾಣ ಮಾಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳ ಮೇಲ್ವಿಚಾರಣೆ, ದುರಸ್ಥಿ. ಸದರಿ ಕಾಮಗಾರಿಗಳ ಗುತ್ತಿಗೆದಾರರು ಕಟ್ಟಡ ನಿರ್ಮಾಣ ಮಾಡಿ ಸಲ್ಲಿಸುವ ಬಿಲ್ಲುಗಳ ಪರಿಶೀಲನೆ ಇತ್ಯಾದಿ ಕಾರ್ಯಗಳ ಕಡತಗಳ ನಿರ್ವಹಣೆಗಾಗಿ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

ಆಡಳಿತ ಶಾಖೆ, ಶಿಕ್ಷಣ ಶಾಖೆ, ತಾಂತ್ರಿಕ ಶಾಖೆಗಳಿಂದ ಕಾಲಕಾಲಕ್ಕೆ ಸಿಬ್ಬಂದಿಗಳ ವೇತನ, ವಿದ್ಯಾರ್ಥಿಗಳಿಗೆ ಸೌಲಭ್ಯಗಳಿಗಾಗಿ ಭರಿಸಬೇಕಾದ ಮೊತ್ತ ಬಿಲ್ಲುಗಳು, ವಸತಿ ಶಾಲೆಗಳ ನಿರ್ವಹಣೆಗೆ ಅನುದಾನ ಬಿಡುಗಡೆ, ಕಟ್ಟಡ ಕಾಮಗಾರಿಗಳ ಬಿಲ್ಲುಗಳು ಪಾವತಿ ಹಾಗೂ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಹಾಗೂ ಲೆಕ್ಕಾಚಾರಗಳ ದಾಖಲೀಕರಣ ಇತ್ಯಾದಿ ಕಾರ್ಯಗಳನ್ನು ಲೆಕ್ಕಶಾಖೆಯಲ್ಲಿ ನಿರ್ವಹಿಸಲು ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

JEE/NEET/CET ತರಬೇತಿ ನೀಡುವುದು. ಆಡಳಿತ ಶಾಖೆ, ಶಿಕ್ಷಣ ಶಾಖೆ, ತಾಂತ್ರಿಕ ಶಾಖೆ ಹಾಗೂ ಲೆಕ್ಕಶಾಖೆಗಳಲ್ಲಿ ಹೊಸ ತಂತ್ರಾಂಶಗಳನ್ನು ಅಳವಡಿಸಲಾಗಿದ್ದು, HRMS, SMS, FMS, Spatika, e-Procurement, e-Office, ತಂತ್ರಾಂಶಗಳನ್ನು ದೈನಂದಿನ ಕೆಲಸಗಳಿಗೆ ನಿರ್ವಹಿಸಲಾಗುತ್ತಿದೆ. ಸದರಿ ತಂತ್ರಾಂಶಗಳನ್ನು ನಿರ್ವಹಣೆ ಮಾಡಲು ಕಂಪ್ಯೂಟರ್ ಹಾಗೂ ತಂತ್ರಜ್ಞಾನದಲ್ಲಿ ಪ್ರಾವೀಣ್ಯತೆ ಹೊಂದಿರುವ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

ಸಂಘದ ಕೇಂದ್ರ ಕಛೇರಿಯಲ್ಲಿನ ಕೆಲಸಗಳ ನಿರ್ವಹಣೆಗೆ ಹಾಲಿ 2 ದ್ವಿ.ದ.ಸ/ಕಂಪ್ಯೂಟರ್ ಆಪರೇಟರ್ ಹಾಗೂ 2 ಪ್ರೋಗ್ರಾಮ್ ಎಕ್ಸಿಕ್ಯೂಟಿವ್ ಅಸಿಸ್ಟಂಟ್ ಹುದ್ದೆಗಳು ಮಾತ್ರ ಮಂಜೂರಾಗಿದ್ದು, 6 ಪ್ರ.ದ.ಸ/ಕಂಪ್ಯೂಟರ್ ಆಪರೇಟರ್‌ಗಳನ್ನು ವಸತಿ ಶಾಲೆಗಳಿಂದ ಸ್ಥಳಾಂತರಗೊಂಡಿರುವ ಹುದ್ದೆಗಳಲ್ಲಿ ಕಾರ್ಯನಿವಹಿಸುತ್ತಿದ್ದು ಒಟ್ಟಾರೆ ಕೇಂದ್ರ ಕಛೇರಿಯಲ್ಲಿ 10 ಖಾಯಂ ಪ್ರ.ದ.ಸ ಮತ್ತು ದ್ವಿ.ದ.ಸ/ ಕಂಪ್ಯೂಟರ್ ಆಪರೇಟರ್‌ಗಳು ಕರ್ತವ್ಯ ನಿವರ್ಹಿಸುತ್ತಿರುತ್ತಾರೆ.

ಸಂಘದ ಕೇಂದ್ರ ಕಛೇರಿಯು ಸ್ಥಾಪನೆಗೊಂಡಾಗ 84 ಶಾಲೆಗಳಿದ್ದು ಪ್ರಸ್ತುತ 874 ವಸತಿ ಶಾಲೆಗಳು ರಾಜ್ಯಾದಂತ ಕಾರ್ಯನಿರ್ವಹಿಸುತ್ತಿರುವುದರಿಂದ ಎಲ್ಲಾ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ ಮತ್ತು ಕಟ್ಟಡ ನಿರ್ಮಾಣಕ್ಕೆ ಕೇಂದ್ರ ಕಛೇರಿಗೆ ಮಂಜೂರಾಗಿರುವ 84 ಹುದ್ದೆಗಳಲ್ಲಿ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಕಷ್ಟಸಾಧ್ಯವಾಗಿರುತ್ತದೆ.

ವಸತಿ ಶಾಲೆಗಳಲ್ಲಿ ಕನ್ನಡ, ಆಂಗ್ಲ ಮತ್ತು ಹಿಂದಿ ಭಾಷಾ ವಿಷಯಗಳು, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಐಚ್ಛಿಕ ವಿಷಯಗಳಾಗಿದ್ದು, ಕಂಪ್ಯೂಟರ್ ಶಿಕ್ಷಣ ಐಚ್ಛಿಕ ವಿಷಯವಾಗಿಲ್ಲ ಆದ್ದರಿಂದ 561 ಖಾಯಂ ಕಂಪ್ಯೂಟರ್ ಶಿಕ್ಷಕರ ಪೈಕಿ ಕಂಪ್ಯೂಟರ್ ತಂತ್ರಾಂಶದಲ್ಲಿ ಜ್ಞಾನವುಳ್ಳ 11 ಕಂಪ್ಯೂಟರ್ ಶಿಕ್ಷಕರನ್ನು ವಸತಿ ಶಾಲೆಗಳಿಂದ OOD ಆಧಾರದ ಮೇಲೆ ಆಡಳಿತಾತ್ಮಕ ಹಿತದೃಷ್ಟಿಯಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಕೇಂದ್ರ ಕಛೇರಿಯಲ್ಲಿ ನಿಯೋಜನೆಗೆ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಕಂಪ್ಯೂಟರ್ ಶಿಕ್ಷಕರ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣವನ್ನು ನೀಡಲು ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ಸಂಘದ ಕೇಂದ್ರ ಕಛೇರಿಗೆ ಅವಶ್ಯವಿರುವ ವಿವಿಧ ವೃಂದದ 44 ಹುದ್ದೆಗಳನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರದ ಕಡತದ ಸಂಖ್ಯೆ: ಸಕ ಇ 207 ಎಂಡಿಎಸ್ 2023 ರಲ್ಲಿ ಆರ್ಥಿಕ ಇಲಾಖೆಯು ಸ್ಪಷ್ಟೀಕರಣ ಕೋರಿದ್ದು, ಸಂಘದಿಂದ ಆರ್ಥಿಕ ಇಲಾಖೆಯು ಕೋರಿರುವ ಸ್ಪಷ್ಟೀಕರಣ ನೀಡಲು ಕ್ರಮವಹಿಸಲಾಗುತ್ತಿದೆ.

ವಸತಿ ಶಾಲೆ/ಕಾಲೇಜುಗಳ ಸುಗಮ ನಿರ್ವಹಣೆಗಾಗಿ, ಸಿಬ್ಬಂಧಿಗಳ ಸೇವಾ ಸೌಲಭ್ಯಗಳನ್ನು ನಿಗಧಿತ ಅವಧಿಯಲ್ಲಿ ಒದಗಿಸಲು ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಶಿಕ್ಷಣ ಗುಣಮಟ್ಟವನ್ನು ಬಲಪಡಿಸಲು ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಆದ್ದರಿಂದ ಕೆಲವು ವಸತಿ ಶಾಲೆಗಳಿಂದ ಮಾತ್ರ ಕಂಪ್ಯೂಟರ್ ಶಿಕ್ಷಕರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ನಿಯೋಜನೆ ಮೇರೆಗೆ ಕೇಂದ್ರ ಕಛೇರಿಯಲ್ಲಿ ಸೇವೆಯನ್ನು ಪಡೆಯಲಾಗಿರುತ್ತದೆ.

ಕಾರ್ಯನಿರ್ವಾಹಕ ನಿರ್ದೇಶಕರು